127

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಛೇರಿ:
ನಂ-29, ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-5700117
ವೆಬ್ ಸೈಟ್: www.cescmysore.org
CIN:U40109KA2004SGC035177

ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ ಮತ್ತು ಕೊಡಗು,
ಶ್ರೀ ಹರ್ಷರಸ್ತೆ, ಚಾ.ವಿ.ಸ.ನಿ.ನಿ., ಮೈಸೂರು.
ದೂರವಾಣಿ: 0821-2420850, ಫ್ಯಾಕ್ಸ್:0821-2434077
ಈ-ಮೇಲ್: seechnkodagu@cescmysore.org

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2018-19/ eys. 160

ದಿನಾಂಕ: 25.102018

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ 16.10.2018 ಗುರುವಾರ ಪೂರ್ವಾಹ್ನ 11.00 ಗಂಟೆಯಿಂದ 12.00 ಗಂಟೆಯವರೆಗೆ ಶ್ರೀಯುತ ಪ್ರತಾಪ್.ಎಂ ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಮೈಸೂರುರವರ ಅಧ್ಯಕ್ಷತೆಯಲ್ಲಿ ಸೋಮವಾರಪೇಟೆ ಉಪವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿ.

**ಉಪಸ್ಥಿತರಿದ್ದ ಅಧಿಕಾರಿಗಳು**

1. ಶ್ರೀಯುತ ಪ್ರತಾಪ್.ಎಂ : ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ)ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಮೈಸೂರು.
2. ಶ್ರೀಮತಿ ತಾರಾ.ಎನ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ)ಚಾಮರಾಜನಗರ-ಕೊಡಗು ವೃತ್ತ, ಸೆಸ್ಕ್ ಮೈಸೂರು.
3. ಶ್ರೀ.ಬಿ.ಸೋಮಶೇಖರ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್ ಕಾ ಮತ್ತು ಪಾ ವಿಭಾಗ ಮಡಿಕೇರಿ.
4. ಶ್ರೀ.ಪಿ.ಎನ್.ದೇವಯ್ಯ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾ) ಸೆಸ್ಕ್ ಕಾ ಮತ್ತು ಪಾ ವಿಭಾಗ ಮಡಿಕೇರಿ.
5. ಶ್ರೀ.ಧನಂಜಯ.ಕೆ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಸೆಸ್ಕ್ ಕಾ ಮತ್ತು ಪಾ ವಿಭಾಗ ಮಡಿಕೇರಿ.
6. ಶ್ರೀ.ಸಂತೋಷ್ ಕೆ.ಪಿ : ಸಹಾಯಕ ಇಂಜಿನಿಯರ್(ವಿ) ಸೆಸ್ಕ್ ಉಪವಿಭಾಗ ಸೋಮವಾರಪೇಟೆ.
7. ಶ್ರೀ.ಬಿ.ಪಿ.ಹೇಮಂತ್‌ಕುಮಾರ್: ಕಿರಿಯ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಸೋಮವಾರಪೇಟೆ.
8. ಶ್ರೀ.ರುಕ್ಮಾಂಗದ ಕುಮಾರ್ : ಕಿರಿಯ ಇಂಜಿನಿಯರ್(ವಿ) ಚಾ.ವಿ.ಸ.ನಿ.ನಿ ಶನಿವಾರಸಂತೆ.
9. ಶ್ರೀ.ರಂಗಸ್ವಾಮಿ : ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಶಾಂತಳ್ಳಿ.
10. ಶ್ರೀ.ಮನುಕುಮಾರ್ : ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಆಲೂರು ಸಿದ್ದಾಪುರ.
11. ಶ್ರೀಮತಿ.ಕವಿತಾ.ಕೆ : ಕಿರಿಯ ಇಂಜಿನಿಯರ್(ವಿ)(ಪ್ರಭಾರ) ಚಾ.ವಿ.ಸ.ನಿ.ನಿ ಕೊಡ್ಲಿಪೇಟೆ.
12. ಶ್ರೀ.ಗುಣಶೇಖರ್ : ಸಹಾಯಕ ಇಂಜಿನಿಯರ್(ತಾಂ) ಪ್ರಭಾರ ಸೆಸ್ಕ್ ಉಪ ವಿಭಾಗ ಸೋಮವಾರಪೇಟೆ
: ಹಿರಿಯ ಸಹಾಯಕ ಚಾ.ವಿ.ಸ.ನಿ.ನಿ ಸೋಮವಾರಪೇಟೆ.

ಸಭೆಯಲ್ಲಿ ಸೋಮವಾರಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂ | ಗ್ರಾಹಕರ ಹೆಸರು ಮತ್ತು ವಿಳಾಸ | ದೂರು | ಸಲಹೆ |
|---|---|---|---|
| 1. | ಸುಬ್ರಮಣಿ ಆಲೆಕಟ್ಟೆ ರಸ್ತೆ | * ಚೌಡ್ಲು ಪ್ರಾಥಮಿಕ ಶಾಲೆ ಹತ್ತಿರ ತೋಟದೊಳಗೆ ಇರುವ ಕರೆಂಟ್ ಲೈನನ್ನು ಇಲಾಖೆ ವತಿಯಿಂದ ರಸ್ತೆ ಬದಿಗೆ ಸ್ಥಳಾಂತರಿಸಲು ಕೇಳಿಕೊಂಡರು.<br><br>* ಹಾನ್‌ಗಲ್‌ಬಾಣೆ ನಾಗರಾಜ್ ಮನೆ ಹತ್ತಿರ ಬರೆ ಜರಿದು ಕಂಬ ಬೀಳುವಂತಿದ್ದು ಸರಿಪಡಿಸಲು ಕೇಳಿಕೊಂಡರು. | * ದೂರಿನ ಅರ್ಜಿ ನೀಡಲು ಸೂಚಿಸಿ, ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕ್ರಮಕೈಗೊಳ್ಳಲು ಸೂಚಿಸಿದರು.<br><br>* ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿದರು. |
| 2. | ಸುರೇಶ್ ಶೆಟ್ಟಿ ಅಧ್ಯಕ್ಷರು | * ಬೇಳೂರು ರಸ್ತೆ H.P ಗ್ಯಾಸ್ ಗೋಡೌನ್ ಹತ್ತಿರ ವಿದ್ಯುತ್ ಲೈನ್‌ಗಳು | * ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿದರು |

| | | | |
|---|---|---|---|
| | ಜಯ ಕರ್ನಾಟಕ ಸಂಘ | ಜೋತುಬಿದ್ದು ವಾಹನಕ್ಕೆ ತಗಲುವಂತಿದೆ.<br><br>* ಸೆಸ್ಕ್ ಉಪವಿಭಾಗ ಕಛೇರಿ ಹಿಂಭಾಗ ಬರೆ ಜರಿದು ಆಫೀಸ್ ಬೀಳುವಂತಿದ್ದು, ತಡೆಗೋಡೆ ಕಟ್ಟುವ ಕಾಮಗಾರಿ ಪ್ರಾರಂಭ ಮಾಡಿರುವುದಿಲ್ಲ ಯಾಕೆ? ಎಂದು ಕೇಳಿದರು.<br><br>* IPDS ಕಾಮಾಗಾರಿಯನ್ನು ಯಾವಾಗ ಪ್ರಾರಂಭ ಮಾಡುವುದಾಗಿ ಕೇಳಿದರು.<br><br>* OLV ಕಾನ್ವೆಂಟ್ ಹತ್ತಿರ IPDS ಯೋಜನೆಯಲ್ಲಿ ಕಂಬ ನೆಡಲು ಗುಂಡಿ ತೆಗೆದಿರುವುದನ್ನು ತಕ್ಷಣ ಮುಚ್ಚಲು ಕೇಳಿಕೊಂಡರು.<br>* ಐಗೂರು ಟಾಟಾ ಎಸ್ಟೇಟ್ ನಲ್ಲಿ ಕಿರಿಯ ಮಾರ್ಗದಾಳುರವರಿಗೆ ವಿದ್ಯುತ್ ಅಪಘಾತ ಸಂಭವಿಸಿದ್ದು, ಅಪಘಾತ ನಡೆಯದಂತೆ ಏನು ಕ್ರಮ ಕೈಗೊಂಡಿರುವಿರಿ ಎಂದು ಕೇಳಿದರು.<br><br>* ಜನಸಂಪರ್ಕ ಸಭೆಯಲ್ಲಿ ಸಾರ್ವಜನಿಕರು ಕಡಿಮೆ ಬಂದಿದ್ದು, ಸಭೆಯ ಬಗ್ಗೆ ಹೆಚ್ಚಿನ ಪ್ರಚಾರ ಮಾಡಬೇಕೆಂದು ತಿಳಿಸಿದರು.<br><br>* ಮಳೆಗಾಲದ ಸಮಯದಲ್ಲಿ ವಿದ್ಯುತ್ ಲೈನ್‌ಗಳಲ್ಲಿ ಉಂಟಾದ ತೊಂದರೆಗಳನ್ನು ಸರಿಪಡಿಸಲು ಎಲ್ಲಾ ಸಿಬ್ಬಂದಿ ವರ್ಗದವರು ಹಗಲು-ರಾತ್ರಿಯೆನ್ನದೆ ದುಡಿದಿದ್ದು ಅವರಿಗೆ ನಮ್ಮ ತುಂಬು ಹೃದಯದ ಹಾರ್ದಿಕ ಧನ್ಯವಾದಗಳು ಹಾಗೂ ಅವರ ಜೊತೆ ಬೋಜನ ಕೂಟ ಏರ್ಪಡಿಸಲು ಅನುವು ಮಾಡಿಕೊಡಬೇಕೆಂದು ಕೇಳಿಕೊಂಡರು. | <br><br>* ಮಳೆಗಾಲ ಸಮಯದಲ್ಲಿ ಕಾಮಗಾರಿ ಸ್ಥಗಿತಗೊಳಿಸಿದ್ದು, ಶೀಘ್ರವಾಗಿ ಪ್ರಾರಂಭಿಸಲು ಸೂಚಿಸುವುದಾಗಿ ತಿಳಿಸಿದರು.<br><br>* ಮಳೆ ನಿಂತ ತಕ್ಷಣ ಕಾಮಗಾರಿಯನ್ನು ಪ್ರಾರಂಭಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.<br><br>* ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ತಕ್ಷಣ ಕ್ರಮ ಕೈಗೊಳ್ಳಲು ಆದೇಶಿಸಿದರು.<br><br>* ಸದರಿ ಕಿರಿಯ ಮಾರ್ಗದಾಳುರವರಿಗೆ ಚಿಕಿತ್ಸೆ ನೀಡಿದ್ದು ಗುಣಮುಖರಾಗಿದ್ದಾರೆ. ನಿಗಮದ ಕರ್ತವ್ಯದ ವೇಳೆಯಲ್ಲಿ ಸುರಕ್ಷಾ ಸಾಮಾಗ್ರಿಗಳನ್ನು ಉಪಯೋಗಿಸಲು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.<br>* ವಾರ್ತಾಧಿಕಾರಿಯವರಿಗೆ 3 ದಿನದ ಹಿಂದೆಯೇ ಪತ್ರ ಬರೆದಿದ್ದು, ರೇಡಿಯೋ ಮತ್ತು ದಿನ ಪತ್ರಿಕೆಗಳಲ್ಲಿ ಪ್ರಚಾರ ನೀಡಲಾಗಿದೆ ಎಂದು ತಿಳಿಸಿದರು.<br><br>* ನಮ್ಮ ಸಿಬ್ಬಂದಿವರ್ಗದವರು ಚೆನ್ನಾಗಿ ಕೆಲಸ ನಿರ್ವಹಿಸಿರುವುದರಿಂದ ನಮಗೂ ಹೆಮ್ಮೆ ಇದೆ. ಸಿಬ್ಬಂದಿ ವರ್ಗದವರ ಜೊತೆ ಬೋಜನ ಕೂಟಕ್ಕಾಗಿ ಕಛೇರಿಯನ್ನು ಸಂಪರ್ಕಿಸಲು ಸೂಚಿಸಲಾಯಿತು. |
| | ಕೆ.ಎಮ್. ಅನಿಲ್‌ಕುಮಾರ್ ಚೌಡ್ಲು ಗ್ರಾಮ. | * ಕಿಕ್ಕರಳ್ಳಿ ಮೈಕ್ರೋಸ್ಟೇಷನ್ ಹತ್ತಿರ ರಸ್ತೆ ಬದಿಯಲ್ಲಿ ಕಂಬ ಬೆಂಡಾಗಿದ್ದು ಸರಿಪಡಿಸಲು ಕೇಳಿಕೊಂಡರು. | * ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸರಿಪಡಿಸಲು ಸೂಚಿಸಿದರು. |

| | | | |
|---|---|---|---|
| 4. | ಗೋಪಾಲಕೃಷ್ಣ ಕಾಜೂರು. | * ಕಾಜೂರು ಗ್ರಾಮದಲ್ಲಿ ಲೋ ವೋಲ್ಟೇಜ್ ಸಮಸ್ಯೆ ಇದ್ದು, ಕುಡಿಯುವ ನೀರು ಮೋಟಾರ್ ರನ್ ಅಗುತ್ತಿಲ್ಲ. ಹೆಚ್ಚುವರಿ ಪರಿವರ್ತಕ ಅಳವಡಿಸುವಂತೆ ಕೇಳಿಕೊಂಡರು.<br><br>* ಕಾಜೂರು ಗ್ರಾಮದಲ್ಲಿ ಹೆಚ್ಚಿನ ಲೈನ್ ಗಳು ಕಾಫಿ ತೋಟದೊಳಗೆ ಇದ್ದು ರಸ್ತೆ ಬದಿಗೆ ಸ್ಥಳಾಂತರಿಸಲು ಕೇಳಿಕೊಂಡರು. | * ಕಾಮಗಾರಿ ಮಂಜೂರಾತಿಯಾಗಿದ್ದು ಟೆಂಡರ್ ಕರೆದು ಕೆಲಸ ನಿರ್ವಹಿಸುವುದಾಗಿ ತಿಳಿಸಿದರು.<br><br>* ಸ್ವಯಂ ನಿರ್ವಹಣೆ ಯೋಜನೆಯಲ್ಲಿ ಕಾಮಗಾರಿ ನಿರ್ವಹಿಸಲು ಸೂಚಿಸಿದರು. |
| 5. | ಎ.ಮಂಜು ಕರ್ಕಳ್ಳಿ | * ಸೌಭಾಗ್ಯ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸಿದ್ದು, ಕಾಮಗಾರಿ ಯಾವಾಗ ಕೈಗೆತ್ತಿಕೊಳ್ಳುವಿರಿ ಎಂದು ಕೇಳಿಕೊಂಡರು. | * ಈ ಯೋಜನೆಯು ಭಾರತ ಸರ್ಕಾರದ ಯೋಜನೆಯಾಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿದೆ ಎಂದು ತಿಳಿಸಲಾಯಿತು. |
| 6. | ಅಜ್ಜಯ್ಯ ಕೊಡ್ಲಿಪೇಟೆ. | * ಪೈಸಾರಿ ಜಾಗದಲ್ಲಿರುವ ಗ್ರಾಹಕರ ಹೆಸರು ಬದಲಾವಣೆಗಾಗಿ ನೊಂದಾಯಿತ ದಾಖಲೆಗಳನ್ನು ನೀಡುವಂತೆ ಕೇಳುತ್ತಾರೆ. ಆದರೆ ಪೈಸಾರಿ ಜಾಗವನ್ನು ರಿಜಿಸ್ಟರ್ ಮಾಡಲು ಸಾಧ್ಯವಿರುವುದಿಲ್ಲ ಎಂದು ಕೇಳಿದರು.<br><br>* 5 ವರ್ಷ ಲೀಸ್‌ಗೆ ನೀಡಿರುವ ಶಕ್ತಿ ಸ್ಥಾವರದ ಖಾತೆಯನ್ನು ಮಾಲೀಕರ ಹೆಸರಿಗೆ ಹೆಸರು ಬದಲಾವಣೆ ಮಾಡಿಕೊಡಲು ಕೇಳಿಕೊಂಡರು. | * ಹೆಸರು ಬದಲಾವಣೆಗಾಗಿ ಬೇಕಾಗಿರುವ ಎಲ್ಲಾ ದಾಖಲೆಗಳನ್ನು ಪಡೆದುಕೊಂಡು ಸಮಸ್ಯೆ ಬಗೆಹರಿಸುವಂತೆ ಸಂಬಂಧಿಸಿದ ಹಿರಿಯ ಸಹಾಯಕರಿಗೆ ಸೂಚಿಸಿದರು.<br><br>* ಲೀಸ್‌ಗೆ ಪಡೆದುಕೊಂಡಿರುವ ಬಾಡಿಗೆದಾರರು ಅರ್ಜಿ ನೀಡಿದರೆ ಬದಲಾಯಿಸಿ ಕೊಡಲಾಗುವುದು ಎಂದು ತಿಳಿಸಿದರು. |

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ವಾಣಿಜ್ಯ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಮಡಿಕೇರಿ ರವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಸೋಮವಾರಪೇಟೆ ಉಪವಿಭಾಗ ರವರ ಮಾಹಿಗಾಗಿ.